# ಹೆಚ್ಚುವರಿ ಭೋಜನ ಬಿಲ್ ನಿರಾಕರಣೆ ಸರಿಯಲ್ಲ: ಪರಮಾನಂದ

ಮೈಸೂರು: ಮೈಸೂರು ವಿವಿ ಅಧೀನದ ಕಾಲೇಜು ವಿದ್ಯಾರ್ಥಿ ನಿಲಯಗಳ ಪರಿಶಿಷ್ಟ ಜಾತಿ ವಿದ್ಯಾರ್ಥಿಗಳ ಹೆಚ್ಚುವರಿ ಭೋಜನ ವೆಚ್ಚದ ಬಿಲ್ ಗಳನ್ನು ಭರಿಸಲು ಅವಕಾಶವಿಲ್ಲ ಎಂದು ಸಮಾಜ ಕಲ್ಯಾಣ ಇಲಾಖೆ ಆಯುಕ್ತರು ಸುತ್ತೋಲೆ ಹೊರಡಿಸಿರುವುದು ಈ ಸಮುದಾಯಗಳ ವಿದ್ಯಾರ್ಥಿಗಳ ವಿದ್ಯಾಭ್ಯಾಸಕ್ಕೆ ದೊಡ್ಡ ಹೊಡೆತ ನೀಡಲಿದೆ ಎಂದು ಭೀಮಬಲ ಬಳಗದ ಸಂಚಾಲಕ ಎಂ.ಎಸ್. ಪರಮಾನಂದ ಕಿಡಿಕಾರಿದರು.

ನಗರದಲ್ಲಿ ಸುದ್ದಿಗಾರರೊಡನೆ ಮಾತನಾಡಿ, ಇದು ಪರಿಶಿಷ್ಟ ಜಾತಿಯ ವಿದ್ಯಾರ್ಥಿಗಳ ಅನ್ನ ಕಿತ್ತುಕೊಳ್ಳುವ ಕ್ರಮವಾಗಿದೆ. ಮಹತ್ವಾಕಾಂಕ್ಷೆಯಿಂದ ಓದಲು ಬರುವವರಿಗೆ ದೊಡ್ಡ ಸಮಸ್ಯೆಯುಂಟು ಮಾಡುತ್ತದೆ. ವಸತಿ ನಿಲಯಗಳು ಇರುವ ಕಾರಣಕ್ಕಾಗಿಯೇ ಪರಿಶಿಷ್ಟ ಜಾತಿಯ ವಿದ್ಯಾರ್ಥಿಗಳು ತಮ್ಮ ಮನೆಯ ಬಡತನ ಮರೆತು ಇಲ್ಲಿ ಬಂದು ಓದಿ ವಿದ್ಯಾವಂತರಾಗುತ್ತಿದ್ದಾರೆ. ಈ ಮೂಲಕ ಉದ್ಯೋಗ ಪಡೆದು ಘನತೆಯ ಜೀವನ ನಡೆಸುತ್ತಿದ್ದಾರೆ. ಮೈಸೂರು ವಿವಿ ವ್ಯಾಪ್ತಿಗೆ ಇಂತಹ 14 ಹಾಸ್ಟೆಲ್ ಬರಲಿದ್ದು, ಈಗ ಇವರ ಅನ್ನ ಕಿತ್ತುಕೊಂಡು ಮೆಸ್ ಬಿಲ್ ಕಟ್ಟಬೇಕೆಂದು ತಾಕೀತು ಮಾಡಲಾಗುತ್ತಿದೆ ಎಂದು ಆರೋಪಿಸಿದರು.

ಆದ್ದರಿಂದ ಸಮಾಜ ಕಲ್ಯಾಣ ಇಲಾಖೆ ಪ್ರಯೋಜನವಿಲ್ಲದ ತನ್ನ ಎಲ್ಲಾ ಕಲ್ಯಾಣ ಕಾರ್ಯಗಳನ್ನು ಬದಿಗಿಟ್ಟು, ತುರ್ತಾತಿ ಪರಿಶಿಷ್ಟ ಜಾತಿ ವಿದ್ಯಾರ್ಥಿಗಳಿಗೆ ಅನ್ನ, ಆಹಾರ ಕೊಡುವ ಕೆಲಸಕ್ಕೆ ಮುಂದಾಗಬೇಕೆಂದು ಒತ್ತಾಯಿಸಿದರು. ಇಲ್ಲದಿದ್ದರೆ ವಿವಿ ಆವರಣದಲ್ಲಿ ದೊಡ್ಡ ಹೋರಾಟ ನಡೆಸಬೇಕಾಗುತ್ತದೆ ಎಂದು ಎಚ್ಚರಿಸಿದರು.

ಗಣೇಶ್ಮೂರ್ತಿ, ಕಾರ್ತಿಕ್, ಮರಿಯಪ್ಪ, ಹೂವಿನ ಸಿದ್ದು ಇದ್ದರು.

# ಜ.3ಕ್ಕೆ ಯೋಗ ಕೋರ್ಸ್ ಶಿಬಿರ



ಮೈಸೂರು: ರಾಮಾನುಜ ರಸ್ತೆ ಅಕ್ಕಮ್ಮಣ್ಣಿ ಉದ್ಯಾನದಲ್ಲಿನ ಮೈಸುರು ಯೋಗೀಶ್ ಟ್ರಸ್ಟ್ ವತಿಯಿಂದ ಜ.3 ರಿಂದ ಸುಮಾರು 300 ಗಂಟೆ ಅವಧಿಯ ಯೋಗಾಭ್ಯಸ ನೂತನ ತರಗತಿ ಆಯೋಜಿಸಲಾಗಿದೆ ಎಂದು ಸಂಸ್ಥಾಪಕ ಯೋಗ ಪ್ರಕಾಶ್ ತಿಳಿಸಿದರು.

ನಗರದಲ್ಲಿ ಸುದ್ದಿಗಾರರೊಡನೆ ಮಾತನಾಡಿ, ಇದು ಬೆಂಗಳೂರಿನ ವಿವೇಕಾನಂದ ಯೋಗ ಅನುಸಂಧಾನ ಸಂಸ್ಥಾನ ವಿವಿ ಪ್ರಮಾಣಪತ್ರ ಹೊಂದಿರುತ್ತದೆ. ನಿರುದ್ಯೋಗಿ ಯುವಕ, ಯುವತಿಯರು, ಕೆಲಸಕ್ಕೆ ಹೋಗುವ ಸಿಬ್ಬಂದಿಗೆ ಅನುಕೂಲಕಾರಿಯಾದುದಾಗಿದೆ. ಪ್ರತಿ ಶನಿವಾರ ಮತ್ತು ಭಾನುವಾರದಂದು ಈ ಕೋರ್ಸ್ ನಡೆಯಲಿದೆ. ಶುಲ್ಕ ಸುಮಾರು 20 ಸಾವಿರ ರೂ. ಗಳಾಗಿರಲಿದೆ. ಆಸಕ್ತರು ಹೆಚ್ಚಿನ ಮಾಹಿತಿಗೆ ದೂ.72590 27880 ಸಂಪರ್ಕಿಸಬಹುದೆಂದರು.

ಸೀಮಾ, ಡಾ.ಮನು, ಬಿ.ವಿ.ಮಂಜುನಾಥ್, ಲಯನ್ ಸುರೇಶ್, ಡಾ.ಕಾವ್ಯ ಇದ್ದರು.

# ಡಾ.ವಸುಂಧರಾ ದೊರೆಸ್ವಾಮಿಗೆ ನೂಪುರಶ್ರೀ ಪ್ರಶಸ್ತಿ



ಮೈಸೂರು: ನಾಟ್ಯಚಾರ್ಯ ಪ್ರೊ.ಕೆ. ರಾಮಮೂರ್ತಿರಾವ್ ಅವರ ನೂಪುರ ಕಲಾವಿದರು ಸಾಂಸ್ಕೃತಿಕ ಟ್ರಸ್ಟ್ ವತಿಯಿಂದ ಕುವೆಂಪುನಗರದ ಗಾನಭಾರತೀ ಸಭಾಗಂಣದಲ್ಲಿ ಏರ್ಪಡಿಸಿದ್ದ ಕೆ. ವನಜಾಕ್ಷಮ್ಮ ಸಂಸ್ಮರಣ 30ನೇ ನೃತ್ಯ ಆರಾಧನಾ ಕಾರ್ಯಕ್ರಮದಲ್ಲಿ ವಿದುಷಿ ಡಾ.ವಸುಂಧರಾ ದೊರೆಸ್ವಾಮಿರಿಗೆ ನೂಪುರಶ್ರೀ ಪ್ರಶಸ್ತಿ ಪ್ರದಾನ ಮಾಡಲಾಯಿತು.

ನಂತರ ವಸುಂಧರಾ ದೊರೆಸ್ವಾಮಿ ಮಾತನಾಡಿ, ಮೈಸೂರಿನ ಸಾಕಷ್ಟು ನೃತ್ಯ ಕಲಾವಿದರು ರಾಷ್ಟ್ರೀಯ, ಅಂತಾರಾಷ್ಟ್ರೀಯ ಮಟ್ಟದಲ್ಲಿ ಹೆಸರು ಮಾಡುತ್ತಿದ್ದಾರೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು. ಸಾಂಸ್ಕೃತಿಕ ರಾಜಧಾನಿ ಮೈಸೂರಿನಲ್ಲಿ ಸದಾ ಸಂಗೀತ- ನೃತ್ಯ ಕಾರ್ಯಕ್ರಮಗಳಿಗೆ ಪ್ರೋತ್ಸಾಹ ಸಿಗುತ್ತಿದೆ. ಅಧ್ಯಕ್ಷತೆ ವಹಿಸಿದ್ದ ವಿಜಯವಿಠಲ ವಿದ್ಯಾಸಂಸ್ಥೆ ಕಾರ್ಯದರ್ಶಿ ಆರ್. ವಾಸುದೇವ ಭಟ್ ಮಾತನಾಡಿ, ಡಾ. ವಸುಂಧರಾ ದೊರೆಸ್ವಾಮಿ ಅವರು ಅಂತಾರಾಷ್ಟ್ರೀಯ ಮಟ್ಟದಲ್ಲಿ ಭರತನಾಟ್ಯಕ್ಕೆ ಹೆಸರು ತಂದುಕೊಟ್ಟಿದ್ದಾರೆ ಎಂದು ಶ್ಲಾಘಿಸಿದರು.

ನೂಪುರ ಕಲಾವಿದರು ಟ್ರಸ್ಟ್ ವ್ಯವಸ್ಥಾಪಕ ಟ್ರಸ್ಟಿ ಕೆ.ರಾಮಮೂರ್ತಿ ರಾವ್ ಮಾತನಾಡಿ, ಕಳೆದ ಆರು ದಶಕಗಳಿಂದಲೂ ನೃತ್ಯ ಕ್ಷೇತ್ರದಲ್ಲಿ ತೊಡಗಿಸಿಕೊಂಡು ಸಾವಿರಾರು ಶಿಷ್ಯರನ್ನು ತಯಾರಿ ಮಾಡಿರುವ ಡಾ. ವಸುಂಧರಾ ದೊರೆಸ್ವಾಮಿ ಅವರಿಗೆ ಮುಂದಿನ ಗಣ-ರಾಜ್ಯೋತ್ಸವ ದಿನಾಚರಣೆ ಸಂದರ್ಭದಲ್ಲಿ ಪದ್ಮಶ್ರೀ ಪ್ರಶಸ್ತಿ ದೊರೆಯಲಿ ಎಂದು ಆಶಿಸಿದರು.

ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಹಿರಿಯ ಪತ್ರಕರ್ತ ಅಂಶಿಪ್ರಸನ್ನಕುಮಾರ್ ರನ್ನು ಸನ್ಮಾನಿಸಲಾಯಿತು. ಟ್ರಸ್ಟಿನ ಲತಾ ರಾಮಮೂರ್ತಿರಾವ್, ಭುವನೇಶ್ವರಿ, ಕೆ. ಆರ್.ವಿಶ್ವದೀಪ್ ಇದ್ದರು.

# ಡಾ.ವೈ.ಡಿ.ರಾಜಣ್ಣ ಕೇಂದ್ರ ಕಸಾಪ ಅಧ್ಯಕ್ಷತೆಗೆ ಅರ್ಹರು



ಮೈಸೂರು: ಕನ್ನಡದ ಅಪೂರ್ವ ನಿಷ್ಠೆಯು ಡಾ.ವೈ.ಡಿ.ರಾಜಣ್ಣ ಕೇಂದ್ರ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಸ್ಥಾನದ ಚುನಾವಣೆಗೆ ಅರ್ಹ ವ್ಯಕ್ತಿ ಎಂದು. ಮೈಸೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಮಡ್ಡಿಕೆರೆ ಗೋಪಾಲ್ ಅಭಿಪ್ರಾಯಪಟ್ಟರು.

ಅಖಿಲ ಕರ್ನಾಟಕ ಒಕ್ಕಲಿಗರ ಮಹಾಸಭಾ ಸಂಘದಲ್ಲಿ ಅಲೆಯನ್ಸ್ ಕ್ಲಬ್ಸ್ ಆಫ್ ಮೈಸೂರು, ನಾಲ್ವಡಿ ಸಂಸ್ಥೆ ಸಹಯೋಗದಲ್ಲಿ ಶಿವರಾಂಪೇಟೆಯಲ್ಲಿರುವ ಸಂಘದ ಕಛೇರಿಯಲ್ಲಿ ಏರ್ಪಡಿಸಿದ್ದ ಅಭಿನಂದನಾ ಸಮಾರಂಭದಲ್ಲಿ ಡಾ.ವೈ.ಡಿ.ರಾಜಣ್ಣ ಉಪ ನಿರ್ದೇಶಕರಾಗಿ ಪದೋನ್ನತಿ ಪಡೆದ ಹಿನ್ನೆಲೆಯಲ್ಲಿ ಆಯೋಜಿಸಿದ್ದ ಡಾ.ವೈ.ಡಿ.ರಾಜಣ್ಣ ಅಭಿನಂದನಾ ಸಮಾರಂಭದಲ್ಲಿ ಮಾತನಾಡಿದರು. ಕೃಷಿ, ನಾಡು, ನುಡಿ ಪರ ಕಾರ್ಯಗಳ ಮೂಲಕ ಜನಮನ್ನಣೆಗಳಿಸಿ, ಜನಸ್ನೇಹಿಅಧಿಕಾರಿಯಾಗಿ ಕನ್ನಡ ನಾಡು ನುಡಿಯ ಬಗ್ಗೆ ಅಪರಿಮಿತ ಅಭಿಮಾನ ಇರಿಸಿಕೊಂಡಿದ್ದಾರೆ. ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಕಳೆದ ಮೂರು ದಶಕಗಳಿಂದ ಗುರುತಿಸಿಕೊಂಡಿದ್ದಾರೆ. ಅವರನ್ನ ಮುಂದಿನ ಕೇಂದ್ರ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಸ್ಥಾನ ಚುನಾವಣೆಗೆ ಸ್ಪರ್ಧಿಸುವಂತೆ ಒತ್ತಾಯ ಮಾಡಬೇಕಿದೆ ಎಂದರು.

ಮೈಸೂರು ಜಿಲ್ಲಾ ಸುಗಮ ಸಂಗೀತ ಪರಿಷತ್ತಿನ ಅಧ್ಯಕ್ಷ ಡಾ.ನಾಗರಾಜ.ವಿ.ಬೈರಿ ಮಾತನಾಡಿದರು. ಹಿರಿಯ ಸಮಾಜಸೇವಕ ಡಾ ರಘುರಾಮ ವಾಜಪೇಯಿ, ಅಲಯನ್ಸ್ ಕ್ಲಬ್ ಮೈಸೂರು ರಾಜ್ಯಪಾಲ ಡಾ.ಎಸ್. ವೆಂಕಟೇಶ್, ಕೈಗಾರಿಕೆ ಮತ್ತು ವಾಣಿಜ್ಯ ಸಂಸ್ಥೆಯ ಅಧ್ಯಕ್ಷ ಕೆ.ಬಿ.ಲಿಂಗರಾಜು, ಅಖಿಲ ಕರ್ನಾಟಕ ಒಕ್ಕಲಿಗರ ಮಹಾಸಭಾದ ಸಂಸ್ಥಾಪಕ ರಾಜ್ಯಾಧ್ಯಕ್ಷ ಎನ್.ಬೆಟ್ಟೇಗೌಡ, ಇಂದಿರಾ ವೆಂಕಟೇಶ್, ಮೈಸೂರು ಕೋ ಆಪರೇಟಿವ್ ಬ್ಯಾಂಕಿನ ನಿರ್ದೇಶಕ ಪಡುವಾರಹಳ್ಳಿ ಎಂ.ರಾಮಕೃಷ್ಣ, ಉದಯಗಿರಿ ಕನ್ನಡ ಸಂಘದ ಅಧ್ಯಕ್ಷ ಜಯಕುಮಾರ್, ಕೆಎಂಪಿಕೆ ಚಾರಿಟೇಬಲ್ ಟ್ರಸ್ಟ್ ಅಧ್ಯಕ್ಷ ವಿಕ್ರಮ ಅಯ್ಯಂಗಾರ್, ಸತೀಶ್ ಮುಂತಾದವರು ಉಪಸ್ಥಿತ-ರಿದ್ದರು.

# ಧರ್ಮ, ಸಂಸ್ಕೃತಿಯಲ್ಲಿನ ಏಕತೆಯೇ ನಮ್ಮ ಭಾಷಾ ಸೌಂದರ್ಯ



ಮೈಸೂರು: ನೂರಾರು ಭಾಷೆಗಳ ವೈವಿಧ್ಯತೆಯಿದ್ದರೂ ಧರ್ಮ ಹಾಗೂ ಸಂಸ್ಕೃತಿ ವಿಚಾರದಲ್ಲಿ ಏಕತೆಯನ್ನು ಹೊಂದಿರುವುದೇ ಭಾರತೀಯ ಭಾಷಾ ಸೌಂದರ್ಯವನ್ನು ತೋರ್ಪಡಿಸುತ್ತದೆ ಎಂದು ಮೈವಿವಿ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ವಿಶ್ರಾಂತ ನಿರ್ದೇಶಕ ಪ್ರೊ.ಆರ್.ವಿ.ಎಸ್.ಸುಂದರಂ ಅಭಿಪ್ರಾಯಪಟ್ಟರು.

ನಗರದ ಮಾನಸಗಂಗೋತ್ರಿ ಆವರಣದಲ್ಲಿರುವ ಭಾರತೀಯ ಭಾಷಾ ಸಂಸ್ಥಾನದಲ್ಲಿ ಗುರುವಾರ ಏರ್ಪಡಿಸಿದ್ದ "ಭಾರತೀಯ ಭಾಷಾ ಉತ್ಸವ" ಕಾರ್ಯಕ್ರಮದಲ್ಲಿ ಮುಖ್ಯ ಭಾಷಣಕಾರರಾಗಿ ಮಾತನಾಡಿದರು. ಪ್ರಪಂಚದ ಬೇರೆ-ಬೇರೆ ದೇಶಗಳನ್ನು ನೋಡಿದರೆ ಅಲ್ಲಿ ಒಂದೇ ರೀತಿಯ ಭಾಷೆ, ಆಚಾರ-ವಿಚಾರಗಳು ಇರುತ್ತವೆ. ಅಲ್ಪ-ಸ್ವಲ್ಪ ಬದಲಾವಣೆಗಳು ಇರುತ್ತವೆ. ಫ್ಲೋರಿಡಾದಲ್ಲಿ ನೂರಾರು ಕಿಲೋಮೀಟರ್ ಸುತ್ತಿದರೂ ಒಂದೇ ನಮೂನೆಯ ಭಾಷೆ ಮಾತನಾಡುವವರು ಸಿಗುತ್ತಾರೆ. ಜರ್ಮನಿಯಲ್ಲಿ ಅವರ ಭಾಷೆಯವರೇ ಹೆಚ್ಚು ಇರುತ್ತಾರೆ. ಆದರೆ ಭಾರತದಲ್ಲಿ ಅಂತಹ ವಾತಾವರಣ ಕಾಣುವುದಿಲ್ಲ. ಇಲ್ಲಿ ಕನ್ಯಾಕುಮಾರಿಯಲ್ಲಿ ರೈಲನ್ನು ಹತ್ತಿ ಕಾಶ್ಮೀರದ ಕಡೆಗೆ ಪ್ರಯಾಣ ಶುರು ಮಾಡಿದರೇ, ನಿಲ್ದಾಣಕ್ಕೊಂದು ಭಾಷೆ ಬದಲಾವಣೆಯಾಗುತ್ತದೆ. ಆಹಾರ ಪದ್ಧತಿಯೂ ಅದೇ ರೀತಿ ಬದಲಾವಣೆಯಾಗುತ್ತದೆ. ಒಂದು ನಿಲ್ದಾಣದಲ್ಲಿ ಇಡ್ಲಿ ಕೊಟ್ಟರೆ, ಮತ್ತೊಂದು ನಿಲ್ದಾಣದಲ್ಲಿ ಉಪ್ಪಿಟ್ಟು, ಚಪಾತಿ, ಪೊಂಗಲ್ ಹೀಗೆ ವಿವಿಧ ಖಾದ್ಯಗಳು ಸಿಗುತ್ತವೆ. ಅಲ್ಲದೇ ಸಿಹಿ ಪದಾರ್ಥಗಳಲ್ಲೂ ವೈವಿಧ್ಯತೆ, ಧರಿಸುವ ಬಟ್ಟೆಗಳಲ್ಲೂ ಭಿನ್ನತೆ, ಜೊತೆಗೆ ಮಾತನಾಡುವ ಭಾಷೆಗಳು ಬೇರೆ-ಬೇರೆಯಾಗಿರುತ್ತವೆ. ಇಷ್ಟೆಲ್ಲ ವೈವಿಧ್ಯತೆ ಇದ್ದರೂ ದೇಶ, ಸಂಸ್ಕೃತಿ, ಧರ್ಮದಲ್ಲಿ ಐಕ್ಯತೆಯನ್ನು ಕಾಣುತ್ತವೆ ಎಂದರು.

ಕಾರ್ಯಕ್ರಮದಲ್ಲಿ ಪ್ರಾಸ್ತಾವಿಕವಾಗಿ ಮಾತನಾಡಿದ ಸಿಐಐಎಲ್‌ನ ಉಪ ನಿರ್ದೇಶಕ ಪ್ರೊ.ಪಿ.ಆರ್.ಧರ್ಮೇಶ್ ಫರ್ನಾಂಡಿಸ್, ಭಾರತದ ವಿಶಾಲ ಮತ್ತು ಸಮೃದ್ಧ ಭಾಷಾ ಪರಂಪರೆಯನ್ನು ಗೌರವಿಸುವ ಸಲುವಾಗಿ ಭಾರತೀಯ ಭಾಷಾ ಉತ್ಸವ ಆಯೋಜನೆ ಮಾಡಲಾಗಿದೆ. ಭಾರತದ ಸ್ಫೂರ್ತಿದಾಯಕ ರಾಷ್ಟ್ರೀಯವಾದಿ ಕವಿ ಮತ್ತು ಸಾಮಾಜಿಕ ದಾರ್ಶನಿಕರಲ್ಲಿ ಒಬ್ಬರಾದ ಸುಬ್ರಹ್ಮಣ್ಯ ಭಾರತೀ ಅವರ ಜನ್ಮ ದಿನದ ಸ್ಮರಣಾರ್ಥ ಆಚರಣೆ ಮಾಡುವ ಈ ಉತ್ಸವ ಏಕತೆ, ಸಾಂಸ್ಕೃತಿಕ ಸಾಮರಸ್ಯ ಮತ್ತು ಭಾಷಾ ಅಭಿಮಾನದ ದ್ಯೋತಕವಾಗಿದೆ ಎಂದರು.

ವಿಶ್ರಾಂತ ಪ್ರಾಧ್ಯಾಪಕ ಪ್ರೊ.ಸಿ.ನಾಗಣ್ಣ "ಭಾಷೆ, ರಾಷ್ಟ್ರೀಯತೆ ಮತ್ತು ಸಂಸ್ಕೃತಿ" ಕುರಿತು ವಿಶೇಷ ಉಪನ್ಯಾಸ ನೀಡಿದರು. ಸಿಐಐಎಲ್ ನಿರ್ದೇಶಕ ಪ್ರೊ.ಶೈಲೇಂದ್ರ ಮೋಹನ್ ಅಧ್ಯಕ್ಷತೆ ವಹಿಸಿದ್ದರು.ಡಾ.ಎಲ್.ಆರ್. ಪ್ರೇಮಕುಮಾರ್ ವೇದಿಕೆಯಲ್ಲಿ ಇದ್ದರು.

# ಮೀಸಲಾತಿಯ ಅನುಸಾರ ನ್ಯಾಯಬೆಲೆ ಅಂಗಡಿಗಳ ಹಂಚಿಕೆಗೆ ಕ್ರಮ: ಮುನಿಯಪ್ಪ



ರಾಷ್ಟ್ರದಲ್ಲಿ ಪ್ರಪ್ರಥಮ ಬಾರಿಗೆ ನಮ್ಮ ರಾಜ್ಯ ಸರ್ಕಾರವು ಖಅ/ಖಖ ಸಮುದಾಯಗಳಿಗೆ ಆದ್ಯತೆ ಮಿಸಲಾತಿ ಅನುಸಾರ ನ್ಯಾಯ ಬೆಲೆ ಅಂಗಡಿ ನೀಡಲು ತಿರ್ಮಾನಿಸಿದೆ.

1) ರಾಜ್ಯದಲ್ಲಿ ಪ್ರಸ್ತುತ 20, 463 ನ್ಯಾಯಬೆಲೆ ಅಂಗಡಿಗಳಿದ್ದು ಅದರಲ್ಲಿ ಅದರಲ್ಲಿ 918 ನ್ಯಾಯಬೆಲೆ ಅಂಗಡಿಗಳು ರದ್ದು ಆಗಿದ್ದುಇವುಗಳನ್ನು ಹೊಸದಾಗಿ ಅಧಿಸೂಚನೆ ಮೂಲಕ ಕರೆಯಲು ಕ್ರಮವಹಿಸಲಾಗುತ್ತಿದೆ.

2) ಶಾಸಕರಾದ ಶರಣಗೌಡ ಕಂದಕೂರು ಸದನದಲ್ಲಿ ಪ್ರಸ್ತಾಪಿಸಿದಂತೆ 5ರಿಂದ 6 ಗ್ರಾಮಗಳು ಸೇರಿ ಒಂದು ನ್ಯಾಯಬೆಲೆ ಅಂಗಡಿ ಇರುವುದು ನಮ್ಮ ಗಮನಕ್ಕೆ ಬಂದಿದ್ದು

3) 20,463 ಪ್ರಸ್ತುತ ರಾಜ್ಯದಲ್ಲಿರುವ ನ್ಯಾಯ ಬೆಲೆ ಅಂಗಡಿಗಳಲ್ಲಿ ಸುಮಾರು 1500 ರಿಂದ 2000, ಪಡಿತರ ಚೀಟಿ ಹೊಂದಿರುವ ನ್ಯಾಯಬೆಲೆ ಅಂಗಡಿಗಳಲ್ಲಿ ಹೆಚ್ಚುವರಿ ಕಾರ್ಡಗಳನ್ನು ವೈಜ್ಞಾನಿಕವಾಗಿ ಮರು ವರ್ಗಿಕರಣ ಮಾಡಿದಾಗ ಸುಮಾರು 4600 ಅಂಗಡಿಗಳನ್ನು ಇನ್ನೂ ಸೃಜಿಸಬಹುದು.

ನ್ಯಾಯಬೆಲೆ ಅಂಗಡಿಗಳನ್ನು ಆ ಊರಿನ ಫಲಾನುಭವಿಗಳಿಗೆ ಅನುಕೂಲವಾಗುವಂತೆ ಹೊಸ ನ್ಯಾಯಬೆಲೆ ಅಂಗಡಿ ಮಂಜೂರು ಮಾಡಲು ಕ್ರಮವಹಿಸಲಾಗುವುದು.

4) 2016 PDS Controle orderಗೆ ತಿದ್ದುಪಡಿ ತಂದು SC/ST ಸಮುದಾಯದವ-ರಿಗೆ ಆದ್ಯತೆ ನೀಡಲು 2025-26 ನೇ ಸಾಲಿನ ಆಯ-ವ್ಯಯದ ಘೋಷಣೆಯಂತೆ ತಿದ್ದುಪಡಿ ಮಾಡಿ ಮಾರ್ಗ ಸೂಚಿಗಳನ್ನು ಹೊರಡಿಸಲಾಗಿದೆ.

5) ಈ ವಿಷಯದ ಕುರಿತು ಸರ್ಕಾರವು ಚಾಲ್ತಿಯಲ್ಲಿರುವ PDS Controle Order 2016 ನ್ನು ತಿದ್ದುಪಡಿ ಮಾಡಿ ದಿನಾಂಕ 14.11.2025 ರಂದು ತಿದ್ದುಪಡಿ ಆದೇಶವನ್ನು ಹೊರಡಿಸಿದ್ದು ಈ ಕುರಿತು ನ್ಯಾಯಬೆಲೆ ಅಂಗಡಿ ಹಂಚಿಕೆಯಲ್ಲಿ ಮೀಸಲಾತಿ ನೀತಿ ಅನುಸರಿಸಲು ಜಿಲ್ಲಾಧಿಕಾರಿಗಳ ಹಂತದಲ್ಲಿ ಸಮಿತಿಯನ್ನು ದಿನಾಂಕ 17.11.2025 ರಂದು ರಚಿಸಿ ನಿರ್ದೇಶನ ನೀಡಲಾಗಿದೆ. ಈ ಕಾರ್ಯ ಪ್ರಗತಿಯಲ್ಲಿದೆ.

6) ಈಗ ರಾಜ್ಯದಲ್ಲಿ ನ್ಯಾಯಬೆಲೆ ಅಂಗಡಿಗಳು = 20,463 ರಲ್ಲಿ SC = 983 ನ್ಯಾಯಬೆಲೆ ಅಂಗಡಿಗಳು ಮಾತ್ರ ಇವೆ.

(17% = 3607 – 983 = 2624 ಇನ್ನು ಕೊಡಬೇಕಾಗುತ್ತದೆ.)

ST = 490 (7% = 1,383 – 490 = 893 ಇನ್ನು ಕೊಡಬೇಕಾಗುತ್ತದೆ )

Total = 24% ಪ್ರಕಾರ 4,990 ನ್ಯಾಯಬೆಲೆ ಅಂಗಡಿಗಳು ಇರಬೇಕಾಗಿತ್ತು .

ಆದರೆ SC/STಸೇರಿ 1473 ಮಾತ್ರ ಇದ್ದು ಇನ್ನೂ 3,517 ನ್ಯಾಯ ಬೆಲೆ ಅಂಗಡಿಗಳನ್ನು SC/ST ಸಮುದಾಯದವರಿಗೆ ನೀಡಬೇಕಾಗಿರುತ್ತದೆ.

# ಅಮಗಾಂವ್ ನಿವಾಸಿಗಳನ್ನು ಸ್ಥಳಾಂತರ



ಬೆಳಗಾವಿ: ಮಾನವ-ವನ್ಯಜೀವಿ ಸಂಘರ್ಷವನ್ನು ನಿಗ್ರಹಿಸಲು ಮತ್ತು ಅರಣ್ಯವಾಸಿ ಸಮುದಾಯಗಳನ್ನು ಮುಖ್ಯವಾಹಿನಿಗೆ ತರಲು, ಅಮಗಾಂವ್ ಗ್ರಾಮದ ನಿವಾಸಿಗಳನ್ನು ಸ್ಥಳಾಂತರಿಸಲು ಕ್ರಮ ಕೈಗೊಳ್ಳಲಾಗುವುದು ಎಂದು ಅರಣ್ಯ ಸಚಿವ ಈಶ್ವರ್ ಖಂಡ್ರೆ ಗುರುವಾರ ಭರವಸೆ ನೀಡಿದರು.


ಜಿಲ್ಲೆಯ ಖಾನಾಪುರ ತಾಲ್ಲೂಕಿನ ಅರಣ್ಯದೊಳಗೆ ನೆಲೆಗೊಂಡಿರುವ ಅಮಗಾಂವ್ ನಿವಾಸಿಗಳನ್ನು ಭೇಟಿ ಮಾಡಿ ಸ್ಥಳಾಂತರಕ್ಕಾಗಿ ವಿನಂತಿ ಮಾಡಿದ ನಂತರ ಈ ಭರವಸೆ ನೀಡಲಾಯಿತು.

ನಿವಾಸಿಗಳನ್ನು ಉದ್ದೇಶಿಸಿ ಮಾತನಾಡಿದ ಖಂಡ್ರೆ, ಮೊದಲ ಬಾರಿಗೆ ಅಧಿಕಾರ ವಹಿಸಿಕೊಂಡ ನಂತರ, ಹುಲಿ ಮೀಸಲು ಪ್ರದೇಶವಲ್ಲದ ಭೀಮಗಢ ವನ್ಯಜೀವಿ ಅಭಯಾರಣ್ಯದ ತಲೇವಾಡಿಯ 27 ಕುಟುಂಬಗಳನ್ನು ಸ್ವಯಂಪ್ರೇರಣೆಯಿಂದ ಯಶಸ್ವಿಯಾಗಿ ಸ್ಥಳಾಂತರಿಸಲಾಗಿದೆ. ಅದೇ ರೀತಿ, ಅಮಗಾಂವ್ ಮತ್ತು ಇತರ ಗ್ರಾಮಗಳ ಕುಟುಂಬಗಳನ್ನು ಸ್ಥಳಾಂತರಿಸಲು ಕ್ರಮ ಕೈಗೊಳ್ಳಲಾಗುವುದು ಎಂದು ಅವರು ಸಚಿವರ ಕಚೇರಿ ಬಿಡುಗಡೆ ಮಾಡಿದ ಹೇಳಿಕೆಯಲ್ಲಿ ತಿಳಿಸಿದ್ದಾರೆ.

'ತಲೇವಾಡಿ ಸ್ಥಳಾಂತರದ ಬಗ್ಗೆ ಕೆಲವರು ತಪ್ಪು ಮಾಹಿತಿ ಹರಡುತ್ತಿದ್ದಾರೆ. ಅರಣ್ಯಗಳೊಳಗಿನ ವಸಾಹತುಗಳನ್ನು ಸ್ಥಳಾಂತರಿಸುವುದರಿಂದ ಅರಣ್ಯವಾಸಿಗಳನ್ನು ಸಾಮಾಜಿಕ ಮುಖ್ಯವಾಹಿನಿಗೆ ತರಲು ಸಹಾಯವಾಗುತ್ತದೆ. ಇದು ಮಾನವ-ವನ್ಯಜೀವಿ ಸಂಘರ್ಷವನ್ನು ಕಡಿಮೆ ಮಾಡುತ್ತದೆ. ಜೊತೆಗೆ, ಮಾನವ ಹಸ್ತಕ್ಷೇಪವಿಲ್ಲದೆ ಕಾಡುಗಳು ಉತ್ತಮವಾಗಿ ಪುನರುತ್ಪಾದಿಸುತ್ತವೆ' ಎಂದು ಅವರು ಹೇಳಿದರು.

ಕೆಲವರು ತಮಗಾಗಿ ವಿವಿಧ ರೀತಿಯ ಸೌಲಭ್ಯಗಳನ್ನು ಬೇಡಿಕೊಳ್ಳುತ್ತಾರೆ. ಆದರೆ, ಅರಣ್ಯವಾಸಿಗಳು ಯಾವುದೇ ಮೂಲಭೂತ ಸೌಕರ್ಯಗಳಿಲ್ಲದೆ ಕಾಡಿನಲ್ಲಿಯೇ ಉಳಿಯಲಿ ಎಂದು ನಿರೀಕ್ಷಿಸುತ್ತಾರೆ. ಸರ್ಕಾರವು ಉತ್ತಮ ಉದ್ದೇಶದಿಂದ ಪ್ರಾರಂಭಿಸಿರುವ ಕಲ್ಯಾಣ ಕಾರ್ಯಕ್ರಮಗಳಿಗೆ ಅಡ್ಡಿಪಡಿಸಲು ಅವರು ಅನಗತ್ಯವಾಗಿ ದೂರು ನೀಡುತ್ತಾರೆ. ಅವರು ಅರಣ್ಯವಾಸಿಗಳನ್ನು ದಾರಿ ತಪ್ಪಿಸುತ್ತಾರೆ ಮತ್ತು ಅರಣ್ಯವಾಸಿಗಳು ಅಂತಹ ವದಂತಿಗಳಿಗೆ ಗಮನ ಕೊಡಬೇಡಿ ಎಂದು ಮನವಿ ಮಾಡಿದರು.

# ಬೆತ್ತಲೆ ಫೋಟೋ ವೈರಲ್ ಬೆದರಿಕೆ: ಕೇರಳದ ವಿದ್ಯಾರ್ಥಿ ಆತ್ಮಹತ್ಯೆ



ಬೆಂಗಳೂರು: ಸಾಮಾಜಿಕ ಜಾಲತಾಣದಲ್ಲಿ ಬೆತ್ತಲೆ ಫೋಟೋ ವೈರಲ್ ಮಾಡುವ ಬೆದರಿಕೆ ಹೆದರಿದ ಯುವಕನೋರ್ವ ಆತ್ಮಹತ್ಯೆಗೆ ಶರಣಾಗಿದ್ದಾನೆ. ಬೆಂಗಳೂರು ಹೊರವಲಯದ ಹೆಸರುಘಟ್ಟದ ಶಾಂತಿನಗರದಲ್ಲಿ ಈ ಘಟನೆ ನಡೆದಿದೆ. ಖಾಸಗಿ ಕಾಲೇಜಿನಲ್ಲಿ ಎಂಬಿಎ ದ್ವಿತೀಯ ವರ್ಷದಲ್ಲಿ ವ್ಯಾಸಂಗ ಮಾಡುತ್ತಿದ್ದ ಕೇರಳ ಮೂಲದ 25 ವರ್ಷದ ಜಗನ್ ಎಂಬಾತ ಡೆತ್ ನೋಟ್ ಬರೆದಿಟ್ಟು ಆತ್ಮಹತ್ಯೆಗೆ ಶರಣಾಗಿದ್ದಾನೆ. ಜಗನ್ ಡೆತ್ ನೋಟ್ ನಲ್ಲಿ ಮೂರು ಮೊಬೈಲ್ ನಂಬರ್ ಗಳನ್ನು ಬರೆದಿಟ್ಟಿದ್ದನು. ಇದನ್ನು ಪರಿಶೀಲಿಸಿದ ಪೊಲೀಸರಿಗೆ ಫೇಕ್ ವಿಡಿಯೋ ಕಾಲ್‌ನಲ್ಲಿ ಯುವಕ 25 ಸಾವಿರ ರೂ. ಹಣ ಕಳೆದುಕೊಂಡಿದ್ದಾನೆ. ಅಲ್ಲದೆ ಮತ್ತಷ್ಟು ಹಣ ಕೊಡದಿದ್ದರೆ ಬೆತ್ತಲೆ ಫೋಟೋ ಹಾಗೂ ವಿಡಿಯೋ ವೈರಲ್ ಮಾಡುವ ಬೆದರಿಕೆ ಹಾಕಿರುವುದು ಪತ್ತೆಯಾಗಿದೆ.

## ಬಿಸಿಯೂಟದಲ್ಲಿ ಹುಳಗಳು ಪತ್ತೆ, ಆತಂಕ

ಕೊಪ್ಪಳ: ಕೊಪ್ಪಳ ಜಿಲ್ಲೆಯ ಕೆಲವು ಭಾಗಗಳ ಸರ್ಕಾರಿ ಶಾಲೆಗಳಲ್ಲಿ ಆಹಾರ ಧಾನ್ಯಗಳಲ್ಲಿ ಹುಳಗಳು ತುಂಬಿದ್ದು, ಶಾಲಾ ಮಕ್ಕಳ ಮಧ್ಯಾಹ್ನದ ಊಟದಲ್ಲೂ ಪತ್ತೆಯಾಗಿವೆ.

ಕೊಪ್ಪಳ ತಾಲ್ಲೂಕಿನ ಬಿಸರಳ್ಳಿ ಗ್ರಾಮದ ಶಾಲೆಯೊಂದರಲ್ಲಿ ಅನ್ನದಲ್ಲಿ ಹುಳಗಳು ಕಂಡುಬಂದವು. ಕಳೆದ ವಾರ, ಕುಷ್ಟಗಿ ತಾಲ್ಲೂಕಿನ ಮುದ್ದೇನಹಳ್ಳಿಯ ಶಾಲೆಯೊಂದರಲ್ಲಿ ಇದೇ ರೀತಿಯ ಸಮಸ್ಯೆ ಎದುರಾಗಿದ್ದು, ಮಕ್ಕಳ ಆರೋಗ್ಯಕ್ಕೆ ಗಂಭೀರ ಅಪಾಯವನ್ನುಂಟುಮಾಡುತ್ತಿದೆ. ಉನ್ನತ ಅಧಿಕಾರಿಗಳಿಗೆ ಹಲವು ಬಾರಿ ದೂರು ನೀಡಿದ್ದರೂ ಯಾವುದೇ ಕ್ರಮ ಕೈಗೊಂಡಿಲ್ಲ ಎಂದು ಅಧಿಕಾರಿಗಳು ಹೇಳುತ್ತಾರೆ.

ಕೊಪ್ಪಳ ಜಿಲ್ಲೆಯಲ್ಲಿ ಒಟ್ಟಾರೆಯಾಗಿ, ಪ್ರತಿದಿನ 2.8 ಲಕ್ಷ ಮಕ್ಕಳಿಗೆ ಮಧ್ಯಾಹ್ನದ ಊಟವನ್ನು ಒದಗಿಸಲಾಗುತ್ತಿದೆ.

ಎಲ್ಲಾ ಸರ್ಕಾರಿ ಶಾಲೆಗಳಲ್ಲಿ ತಯಾರಿಸಲಾಗುವ ಮಧ್ಯಾಹ್ನದ ಊಟವನ್ನು ಅಧಿಕಾರಿಗಳು ಪರಿಶೀಲಿಸಬೇಕೆಂದು ಮಕ್ಕಳ ಪೋಷಕರು ಒತ್ತಾಯಿಸಿದ್ದಾರೆ. ಶಾಲಾ ಸಮಿತಿಗಳು ಅಥವಾ ಆಡಳಿತ ಮಂಡಳಿಗಳು ಕಡಿಮೆ ಗುಣಮಟ್ಟದ ಆಹಾರ ಧಾನ್ಯಗಳನ್ನು ಖರೀದಿಸಿ ಹಣ ವಂಚಿಸುತ್ತಿರಬಹುದು ಎಂದು ಕೆಲವು ಪೋಷಕರು ಆರೋಪಿಸಿದ್ದಾರೆ.

# ಮಹಿಳೆಯರ ಬಗ್ಗೆ ಸಿಎಂ ಅವಹೇಳನಕಾರಿ ಹೇಳಿಕೆ: ಜಿಲ್ಲಾ ಮಹಿಳಾಮೋರ್ಚಾ ತೀವ್ರ ಖಂಡನೆ

**ವೀರೇಶ್**



**ಪಿರಿಯಾಪಟ್ಟಣ** : ಮುಖ್ಯಮಂತ್ರಿ. ಸಿದ್ಧರಾಮಯ್ಯ ಮಹಿಳಾ ನಾಯಕರ ವಿರುದ್ಧ ಬಳಸುತ್ತಿರುವ ಅವಹೇಳನಕಾರಿ ಪದಪ್ರಯೋಗ ಈಗಲೂ ಮುಂದುವರೆಯುತ್ತಿದ್ದು ಇದನ್ನು ಭಾರತೀಯ ಜನತಾ ಪಕ್ಷ ಮಹಿಳಾ ಮೋರ್ಚ ತೀವ್ರವಾಗಿ ಖಂಡಿಸುತ್ತದೆ. ಎಂದು ಮೈಸೂರು ಜಿಲ್ಲಾ ಮಹಿಳಾ ಮೋರ್ಚಾ ಅಧ್ಯಕ್ಷ ನಳಿನಿ ಗೌಡ ಎಚ್ಚರಿಸಿದರು ಮುಖ್ಯಮಂತ್ರಿಗಳು

ಈ ಹಿಂದೆ ಕೂಡ ಭಾರತದ ಗೌರವಾನ್ವಿತ ಮೊದಲ ಬುಡಕಟ್ಟು ಸಮುದಾಯದ ರಾಷ್ಟ್ರಪತಿಗಳಾದ ಶ್ರೀಮತಿ ದ್ರೌಪದಿ ಮುರ್ಮು ಅವರನ್ನು ಅವಮಾನಿಸಿದ್ದರು. ಈಗ ಕೇಂದ್ರ ಹಣಕಾಸು ಸಚಿವೆ, ಜಾಗತಿಕವಾಗಿ ಗೌರವಿಸಲ್ಪಡುವ, ಭಾರತೀಯ ಜನತಾ ಪಕ್ಷದ ಹಿರಿಯ ನಾಯಕಿಯಾಗಿರುವ ಶ್ರೀಮತಿ ನಿರ್ಮಲಾ ಸೀತಾರಾಮನ್ ರವರ ಸರಧಿಯಾಗಿದ್ದು ಅವರನ್ನೂ ನಿರ್ಲಕ್ಷ್ಯದಿಂದ ಅವಹೇಳನ ಮಾಡಿದ್ದಾರೆ.

ಇದಕ್ಕೆ ಪ್ರತ್ಯುತ್ತರವಾಗಿ ಸಿದ್ದರಾಮಯ್ಯನವರು, "ನಾನು ಗ್ರಾಮೀಣ ಭಾಗದಿಂದ ಬಂದವನು ನಾನು ಮಾತನಾಡುವುದೇ ಗ್ರಾಮೀಣ ಸೊಗಡು ಹಳ್ಳಿ ಭಾಷೆ ಮಾತನಾಡುತ್ತೇನೆ" ಎಂದು ಹಾಸ್ಯಸ್ಪಿತವಾಗಿ ಉತ್ತರಿಸುವ ಮುಖ್ಯಮಂತ್ರಿಗಳು ಅದೇ ಹಳ್ಳಿ ಭಾಷೆಯಲ್ಲಿ ಅವರು ಶ್ರೀಮತಿ ಸೋನಿಯಾ ಗಾಂಧಿ ಮತ್ತು ಶ್ರೀಮತಿ ಪ್ರಿಯಾಂಕಾ ಗಾಂಧಿ ಅವರಿಗೂ ಬಳಸುತ್ತಾರೆಯೇ? ಎಂದು ಪ್ರಶ್ನಿಸಿರುವ ಅಧ್ಯಕ್ಷರು ಶ್ರೀಮತಿ ದ್ರೌಪದಿ ಮುರ್ಮು ಹಾಗೂ ಶ್ರೀಮತಿ ನಿರ್ಮಲಾ ಸೀತಾರಾಮನ್ ಅವರಲ್ಲಿ ಮುಖ್ಯಮಂತ್ರಿಗಳು ಕೂಡಲೇ ಸಾರ್ವಜನಿಕವಾಗಿ ಕ್ಷಮೆಯಾಚಿಸಬೇಕು. ಇಲ್ಲದ ಇಲ್ಲದಿದ್ದಲ್ಲಿ ಭಾರತೀಯ ಜನತಾ ಪಾರ್ಟಿಯ ಮಹಿಳಾಮೂರ್ಚ ರಾಜ್ಯಾದ್ಯಂತ ಪ್ರತಿಭಟನೆ ಹಮ್ಮಿಕೊಳ್ಳಬೇಕಾಗುತ್ತದೆ ಎಂದು ಎಚ್ಚ-ರಿಸಿದ್ದಾರೆ.

# ಮಾದಕ ದ್ರವ್ಯ ಮಾರಾಟ 300 ವಿದೇಶಿ ಪ್ರಜೆಗಳ ಗಡಿಪಾರು



ಬೆಂಗಳೂರು: ಕರ್ನಾಟಕವನ್ನು ಮಾದಕ ದ್ರವ್ಯ ಮುಕ್ತ ರಾಜ್ಯವನ್ನಾಗಿ ಮಾಡಲು ಕಾಂಗ್ರೆಸ್ ಸರ್ಕಾರವು ಮಾದಕ ದ್ರವ್ಯಗಳ ಹಾವಳಿಯನ್ನು ನಿಗ್ರಹಿಸುವ ಬಗ್ಗೆ ಗಂಭೀರವಾಗಿದೆ, ರಾಜ್ಯದಲ್ಲಿ ಮಾದಕ ದ್ರವ್ಯ ವಿರೋಧಿ ಕಾರ್ಯಪಡೆ (ಎಎನ್‌ಟಿಎಫ್) ಸ್ಥಾಪಿಸಲಾಗಿದೆ ಎಂದು ಗೃಹ ಸಚಿವ ಡಾ. ಜಿ. ಪರಮೇಶ್ವರ್ ತಿಳಿಸಿದ್ದಾರೆ.

ದೇಶದಲ್ಲಿ ಮಾದಕ ದ್ರವ್ಯಗಳ ಪೂರೈಕೆಯನ್ನು ನಿಗ್ರಹಿಸುವುದು, ಮಾದಕ ದ್ರವ್ಯ ಮಾರಾಟಗಾರರನ್ನು ಬಂಧಿಸುವುದು ಮಾತ್ರವಲ್ಲದೆ, ಮಾದಕ ದ್ರವ್ಯಗಳ ದುಷ್ಪರಿಣಾಮಗಳ ಬಗ್ಗೆ ಯುವಜನರಿಗೆ ಅರಿವು ಮೂಡಿಸಲು ಶಾಲೆಗಳು ಮತ್ತು ಕಾಲೇಜುಗಳಲ್ಲಿ ಜಾಗೃತಿ ಕಾರ್ಯಕ್ರಮಗಳನ್ನು ಆಯೋಜಿಸುವುದು ಸಹ ಇದರ ಕೆಲಸವಾಗಿದೆ ಎಂದು ಗುರುವಾರ ಪರಿಷತ್ತಿನಲ್ಲಿ ಎಂ-ಎಲ್‌ಸಿ ಅಬ್ದುಲ್ ಜಬ್ಬಾರ್ (ಕಾಂಗ್ರೆಸ್) ಕೇಳಿದ ಪ್ರಶ್ನೆಗೆ ಡಾ. ಪರಮೇಶ್ವರ ಉತ್ತರಿಸಿದರು.

ಗೃಹ ಇಲಾಖೆಯು ಈ ಕೆಲಸಕ್ಕೆ ಸುಮಾರು 56 "ದಕ್ಷ" ಅಧಿಕಾರಿಗಳನ್ನು ಆಯ್ಕೆ ಮಾಡಿದೆ ಎಂದು ಡಾ. ಪರಮೇಶ್ವರ ಹೇಳಿದರು. ಮಾದಕ ದ್ರವ್ಯ ಮಾರಾಟಗಾರರನ್ನು ಬೆಂಬಲಿಸುತ್ತಿರುವ ಪೊಲೀಸ್ ಸಿಬ್ಬಂದಿ ವಿರುದ್ಧವೂ ಎಫ್‌ಐಆರ್ ದಾಖಲಿಸಲಾಗಿದೆ ಎಂದು ಮಾಹಿತಿ ನೀಡಿದರು.

# ಬಯೋ ಇಮೇಜಿಂಗ್ ತಂತ್ರಜ್ಞಾನದಿಂದ ಸಂಶೋಧನೆಗೆ ಅನುಕೂಲ



ನಗರದ ಬನ್ನಿಮಂಟಪದಲ್ಲಿರುವ ಜೆಎಸ್‌ಎಸ್ ಫಾರ್ಮಸಿ ಕಾಲೇಜಿನ ಶ್ರೀರಾಜೇಂದ್ರ ಸಭಾಂಗಣದಲ್ಲಿ ಏರ್ಪಡಿಸಿದ್ದ ಇಂಡಿಯಾ ಬಯೋ ಇಮೇಜಿಂಗ್ ಪ್ರಥಮ ವಾರ್ಷಿಕ ಸಮ್ಮೇಳನವನ್ನು ಸಿಎಫ್‌ಟಿಆರ್‌ಐ ನಿರ್ದೇಶಕ ಡಾ.ಗಿರಿಧರ್ ಪರ್ವತಮ್ ಅವರು ಉದ್ಘಾಟಿಸಿದರು.

ಮೈಸೂರು: ಬಯೋ ಇಮೇಜಿಂಗ್ ತಂತ್ರಜ್ಞಾನದಿಂದ ವೈದ್ಯಕೀಯ ಹಾಗೂ ಆಹಾರ ಸಂಶೋಧನೆಗೆ ತುಂಬ ಅನುಕೂಲವಾಗಲಿದೆ ಎಂದು ಸಿಎಫ್‌ಟಿಆ-ರ್‌ಐ ನಿರ್ದೇಶಕ ಡಾ.ಗಿರಿಧರ್ ಪರ್ವತಮ್ ಅವರು ಅಭಿಪ್ರಾಯಪಟ್ಟರು.

ಇಂಡಿಯಾ ಬಯೋ ಇಮೇಜಿಂಗ್ (ಐಬಿಐ), ಪುಣೆಯ ಐಐಎಸ್‌ಇಆರ್ ಸಹಯೋಗದಲ್ಲಿ ಜೆಎಸ್ ಎಸ್ ಅಕಾಡೆಮಿ ಉನ್ನತ್ತ ಶಿಕ್ಷಣ ಮತ್ತು ಸಂಶೋಧನಾ ಆಕಾಡೆಮಿ ವತಿಯಿಂದ ಬನ್ನಿಮಂಟಪದಲ್ಲಿರುವ ಜೆಎಸ್‌ಎಸ್ ಫಾರ್ಮಸಿ ಕಾಲೇಜಿನ ಶ್ರೀರಾಜೇಂದ್ರ ಸಭಾಂಗಣದಲ್ಲಿ ಏರ್ಪಡಿಸಿದ್ದ ಇಂಡಿಯಾ ಬಯೋ ಇಮೇಜಿಂಗ್ ಪ್ರಥಮ ವಾರ್ಷಿಕ ಸಮ್ಮೇಳನವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಬಯೋ ಇಮೇಜಿಂಗ್ ತಂತ್ರಜ್ಞಾನವನ್ನು ವೈದ್ಯಕೀಯದ ನಾನಾ ವಿಭಾಗದಲ್ಲಿ ಬಳಕೆ ಮಾಡಿಕೊಳ್ಳುತ್ತಿರುವುದಿಂದ, ಆಧುನಿಕತೆಗೆ ತಕ್ಕಂತೆ ವೈದ್ಯಕೀಯ ಕ್ಷೇತ್ರವು ಬೆಳವಣಿಗೆ ಹೊಂದುತ್ತಿದೆ. ಆಹಾರ ಕ್ಷೇತ್ರದಲ್ಲಿ ಬಯೋ ಇಮೇಜಿಂಗ್ ತಂತ್ರಜ್ಞಾನವನ್ನು ಈಗಾಗಲೇ ಸಿಎಫ್‌ಟಿಆರ್‌ಐ ಬಳಕೆ ಮಾಡುತ್ತಿದ್ದುಫ಼ಿ, ಇದರಿಂದ ಸಂಶೋಧಕರಿಗೆ ಬಹಳ ಅನುಕೂಲವಾಗಿದೆ ಎಂದು ಹೇಳಿದರು.

ಆಧುನಿಕ ವೇಗದ ಬದುಕಿನಲ್ಲಿ ತಾಂತ್ರಿಕತೆಯ ಬಗ್ಗೆ ಸಾಕಷ್ಟು ಜ್ಞಾನ ಇರಬೇಕು. ಅದನ್ನು ಸಮಾಜದ ಸುಸ್ಥಿರದ ಅಭಿವೃದ್ದಿಗೆ ಪೂರಕವಾಗಿ ಬಳಸಿಕೊಳ್ಳಬೇಕು. ಸ್ಪರ್ಧಾತ್ಮಕ ಯುಗದಲ್ಲಿ ಬಯೋಇಮೇಜಿಂಗ್ ತಂತ್ರಜ್ಞಾನ ಅಡ್ವಾನ್ಸ್ ಟೆಕ್ನಾಲಜಿಯಾಗಿದೆ. ಅದನ್ನು ಸಮರ್ಪಕವಾಗಿ ಬಳಸಿಕೊಳ್ಳುವ ಕೌಶಲವನ್ನು ಬೆಳೆಸಿಕೊಳ್ಳಬೇಕು ಎಂದರು.

ತಾಂತ್ರಜ್ಞಾನ ಇಲ್ಲದೇ ಜಗತ್ತು ಇಲ್ಲ , ಆ ರೀತಿ ವ್ಯವಸ್ಥೆ ಆಗಿದೆ. ತಾಂತ್ರಿಕತೆಯ ಬಗ್ಗೆ ತಿಳಿದುಕೊಳ್ಳಬೇಕು.ಆದರೆ, ಅದರಲ್ಲಿಯೇ ಮುಳುಗದೆ ಸಮಾಜದ ಅಭಿವೃದ್ದಿಗೆ ಪೂರಕವಾಗುವಂತಹ ಕೆಲಸ ಮಾಡಬೇಕು. ಎಐ ಸೇರಿದಂತೆ ಅನೇಕ ತಂತ್ರಜ್ಞಾನಗಳು ಮನುಷ್ಯನಿಂದಲ್ಲೇ ನಿರ್ಮಾಣವಾಗುತ್ತಿರುವುದು, ಎಲ್ಲವೂ ತಂತ್ರಜ್ಞಾನವೇ ಅಲ್ಲ ಎಂದು ಹೇಳಿದರು.

ಭಾರತದಲ್ಲಿ ಯುವಕರು ಸಂಖ್ಯೆ ಹೆಚ್ಚಾಗಿದೆ. ಇದು ಪ್ರಪಂಚದಲ್ಲಿ ಭಾರತಕ್ಕೆ ಸಿಕ್ಕಿರುವ ಅವಕಾಶ ಎಂದು ಭಾವಿಸಬೇಕು. ಭಾರತದ ಸರಕಾರ ಯುವಕರಿಗಾಗಿ ನೀಡುತ್ತಿರುವ ಯೋಜನೆಗಳನ್ನು ಬಳಸಿಕೊಂಡರೆ, ನಮ್ಮ ದೇಶ ಮತ್ತಷ್ಟು ಅಭಿವೃದ್ದಿಹೊಂದುತ್ತದೆ ಎಂದರು.

ಕಾರ್ಯಕ್ರಮದಲ್ಲಿ ಜೆಎಸ್‌ಎಸ್ ಎಎಚ್‌ಇಆರ್ ಉಪ ಕುಲಪತಿ ಡಾ.ಬಿ.ಬಸವನಗೌಡಪ್ಪ, ಕುಲಸಚಿವ ಡಾ.ಬಿ.ಮಂಜುನಾಥ್, ಅಕಾಡೆಮಿಕ್ ಡೀನ್ ಡಾ.ವಿಶಾಲ್ ಕುಮಾರ್ ಗುಪ್ತಫ಼ಿ, ರಿಸರ್ಚ್ ಡೀನ್ ಡಾ.ಪ್ರಶಾಂತ್ ವಿಶ್ವನಾಥ್, ಡಿಪ್ಯುಟಿ ಡೀನ್ ಡಾ.ಎಸ್.ಚಂದನ್, ಪುಣೆಯ ಐಐ-ಎಸ್‌ಇಆರ್ ಹಿರಿಯ ತಾಂತ್ರಿಕ ಅಧಿಕಾರಿ ಡಾ.ಸಂತೋಷ್ ಪೊದ್ದಾರ್, ಸಹಾಯಕ ಪ್ರಾಧ್ಯಾಪಕಿ ಡಾ.ಎ.ಜಮುನಾ ಬಾಯಿ ಮತ್ತಿತರರು ಇದ್ದರು.